ಒ.ಎಸ್.ನಂಃ16/2017
ಪಿ.ಡಬ್ಲೂ.3

**ದಿಃ24.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ-**ಪ್ರತಿವಾದಿ ಪರ ಶ್ರೀ. **B.V.R.,** ವಕೀಲರಿಂದಃ-

ನಾನು ಡಿಪ್ಲಾಮೇ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸ್ವಂತ ಊರು ಹಾಲೇಕಲ್ಲು ಗ್ರಾಮ ಇರುತ್ತದೆ . ನನಗೆ ವಾದಿ ಮತ್ತು ಪ್ರತಿವಾದಿ ಇಬ್ಬರ ಕುಟುಂಬ ಪರಿಚಯ ಇರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಜಮೀನಿನ ಬಗ್ಗೆ ನನಗೆ ಖುದ್ದು ಮಾಹಿತಿ ಇರುತ್ತದೆ . ಪ್ರತಿವಾದಿ ತಂದೆ ಹೆಸರು ಲೋಕೇಶಪ್ಪ ಅವರ ತಂದೆ ಹೆಸರು ಚೆನ್ನಬಸಪ್ಪ ಇರುತ್ತದೆ . ವಾದಿ ಅಲ್ಪವಯಸ್ಕರು ಇದ್ದಾಗ , ವಾದಿಯ ಅಣ್ಣ ನಾಗರಾಜಪ್ಪ ಮತ್ತು ಅವರ ತಂದೆ ಚೆನ್ನಪ್ಪ ಅವರು ಮತ್ತು ವಾದಿಯ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಪ್ರತಿವಾದಿ ಮಾವ ಚೆನ್ನಬಸಪ್ಪ ಅವರಿಗೆ ದಿಃ 20.03.1979 ರಲ್ಲಿ ಸರ್ವೆ ನಂಬರ್ 68 ರಲ್ಲಿ ಸುಮಾರು 5 ಎಕರೆ 20 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಸರ್ವೆ ನಂಬರ್ 68 ರಲ್ಲಿ ಸುಮಾರು 5 ಎಕರೆ 20 ಗುಂಟೆ ಜಮೀನಿನಲ್ಲಿ ಚೆನ್ನಬಸಪ್ಪ ಮತ್ತು ಅವರ ಕುಟುಂಬದವರು ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ನನಗೆ ವಾದಿ ಮತ್ತು ಪ್ರತಿವಾದಿಗಳಿಗೆ ಎಷ್ಟು ಸರ್ವೆ ನಂಬರ್ 68 ರಲ್ಲಿ ವಿಸ್ತೀರ್ಣದ ಜಮೀನು ಇದ್ದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಾನು ಪ್ರತಿವಾದಿಗೆ ಸೇರಿದ ಸರ್ವೆ ನಂಬರ್ 68 ರಲ್ಲಿ ಸುಮಾರು 5 ಎಕರೆ 20 ಗುಂಟೆ ಜಮೀನ್ನು ಖುದ್ದಾಗಿ ನೋಡಿರುತ್ತೇನೆ . ಸದರಿ 5 ಎಕರೆ 20 ಗುಂಟೆ ಜಮೀನಿನ 3 ಕಡೆ ಕಲ್ಲುಕಟ್ಟೆ ಇರುತ್ತದೆ ಒಂದು ಕಡೆ ಮಣ್ಣಿನ ಏರಿ ಇರುತ್ತದೆ ಎಂದರೆ ಸರಿ. ಸದರಿ ಮಣ್ಣಿನ ಏರಿ ಸುಮಾರು 1 ½ ಅಡಿ ಇರುಬಹುದು . ಸದರಿ ಕಲ್ಲುಕಟ್ಟೆ ಸುಮಾರು 2 ಅಡಿ ಎತ್ತರ , 1 ½ ಅಡಿ ಅಗಲ ಇರುತ್ತದೆ . ಸದರಿ ಕಲ್ಲುಕಟ್ಟೆ ಮತ್ತು ಏರಿ ಮಧ್ಯೆದಲ್ಲಿ ಇರುವ ಜಮೀನಿನಲ್ಲಿ ಪ್ರತಿವಾದಿಗಳು ಅಡಿಕೆ ಬೆಳೆಯನ್ನು ಬೆಳೆದಿರುತ್ತಾರೆ ಎಂದರೆ ಸರಿ. ಸದರಿ ಕಲ್ಲುಕಟ್ಟೆ ಮತ್ತು ಏರಿ ಮಧ್ಯೆದಲ್ಲಿ ಇರುವ ಜಮೀನಿನ ಮಧ್ಯೆ ಇರುವ ಜಮೀನಿನಲ್ಲಿ ನನಗೆ ತಿಳುವಳಿಕೆ ಬಂದಾಗಲಿಂದಲೂ ಪ್ರತಿವಾದಿ ಮತ್ತು ಅವರ ಗಂಡನ ಕುಟುಂಬದವರು ಸ್ವಾಧೀನ ಸನ್ 1979 ರಿಂದಲೂ ಇರುತ್ತಾರೆ ಎಂದರೆ ಸಾಕ್ಷಿ ಒತ್ತುವರಿ ಮಾಡಿಕೊಂಡು ಇರಬಹುದು ಎಂದು ಹೇಳುತ್ತಾರೆ .

ಒ.ಎಸ್.ನಂ:16/2017
ಪಿ.ಡಬ್ಲೂ.3

ನನಗೆ ಒತ್ತುವರಿ ಆದ ಬಗ್ಗೆ ಸರ್ವೆಯವರು ಸರ್ವೆ ಮಾಡಿದಾಗ ತಿಳಿಯುತ್ತದೆ . ಸನ್ 2007-08 ರಲ್ಲಿ ಸದರಿ ಸರ್ವೆ ನಡೆದಿರುತ್ತದೆ ನಿಖರವಾಗಿ ದಿನಾಂಕ ಗೋತ್ತಿರುವುದಿಲ್ಲ . ನನ್ನ ಪಶ್ಚಿಮ ದಿಕ್ಕಿಗೆ ಮಲ್ಲೇಶಪ್ಪ ಅವರ ಜಮೀನು ಇರುತ್ತದೆ . ನಾನು ಸದರಿ ಸರ್ವೆ ಮಾಡಲು ಹಾಜರು ಇದ್ದೇ . ನನ್ನ ಜೋತೆ ರಾಜ್ ಕುಮಾರ್ , ಪ್ರಸನ್ನ , ಸಿದ್ದಪ್ಪ , ವಾದಿಯ ಅಣ್ಣ ನಾಗರಾಜ್ ಇದ್ದೇವು . ನಾವು ಎಲ್ಲರೂ ಸದರಿ ಸರ್ವೆ ದಾಖಲೆಗೆ ಸಹಿ ಮಾಡಿರುತ್ತೇವೆ . ಸದರಿ ದಾಖಲೆಯು ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ಗೋತ್ತಿಲ್ಲ . ನಾನು ಅದನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ . ಸದರಿ ಸರ್ವೆ ವಿಚಾರವಾಗಿ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ . ನನ್ನ ಜಮೀನು ವಾದಿಯ ಜಮೀನಿನ ಪಕ್ಕದಲ್ಲಿಇರುವ ಬಗ್ಗೆ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ . ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಗಳು ಅಕ್ರಮವಾಗಿ ಪ್ರವೇಶಿಸಿ ಅತೀಕ್ರಮ ಪಡಿಸಿಕೊಂಡ ಬಗ್ಗೆ ಬರೆಸಿರುವುದಿಲ್ಲ . ಪ್ರತಿವಾದಿಗಳ ಜಮೀನಿನಲ್ಲಿ ಇರುವ 2 ಬೋರ್ ವೇಲ್ ಗಳು ದಕ್ಷಿಣ ಕಡೆಗೆ ಇರುತ್ತದೆ . ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಹಾಗೆ ದಾವಾ ಸ್ವತ್ತು ಭಾಗ 1 ಮತ್ತು 2 ಬಗ್ಗೆ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಪಂಚಾಯತಿ ಸನ್ 2007-08 ರಲ್ಲಿ ನಡೆದಿರುತ್ತದೆ ದಿನಾಂಕ ನನಗೆ ನಿಖರವಾಗಿ ಗೋತ್ತಿರುವುದಿಲ್ಲ . ಸದರಿ ಪಂಚಾಯತಿಯಲ್ಲಿ ಸಿದ್ದಪ್ಪ , ನಾಗರಾಜ್ ರಾಜ್ ಕುಮಾರ್ ಮತ್ತು ಶೇಖರಪ್ಪ ಇದ್ದರು . ಸದರಿ ಪಂಚಾಯತಿಯನ್ನು ಪ್ರತಿವಾದಿ ಸೇರಿಸಿರುತ್ತಾರೆ . ಸದರಿ ಪಂಚಾಯತಿಯಲ್ಲಿ ಯಾವುದೇ ದಾಖಲೆಗಳು ಆಗಿರುವುದಿಲ್ಲ . ಯಾವುದೇ ಪಂಚಾಯತಿ ಸೇರಿರುವುದಿಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ . ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಎಡಿಎಲ್ ಆರ್ ಗೆ ವಾದಿ ಅರ್ಜಿ ಸಲ್ಲಿಸಿದ ಬಗ್ಗೆ ತಿಳಿಸಿರುವುದಿಲ್ಲ . ವಾದಿ ಈ ದಾವೆಯನ್ನು ಬಿಟ್ಟು ಬೇರೆ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ . ನಾನು ವಕೀಲರ ಬಳಿ ಹೋಗಿರುವುದಿಲ್ಲ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ಬರೆದುಕೊಟ್ಟಿರುತ್ತೇನೆ .ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವ ಹಾಗೆ ದಾವೆ ಸಂಖ್ಯೆ ಗೋತ್ತಿರುವುದಿಲ್ಲ , ಅದರಲ್ಲಿ ಜಗಳೂರು

ನ್ಯಾಯಾಲಯ ಮಾತ್ರ ಬರೆಸಿರುತ್ತೇನೆ . ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಮ್ಮ ಊರಿನಲ್ಲಿ ಬರೆದುಕೊಟ್ಟಿರುತ್ತೇನೆ . ನಾನು ಮೇಲೆ ತಿಳಿಸಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ . ನಾನು ಮತ್ತು ವಾದಿ ಅತ್ಮೀಯರು ಇರುತ್ತೇವೆ ಎಂದರೆ ಸಾಕ್ಷಿ ಪ್ರತಿವಾದಿಯರು ಅತ್ಮೀಯರು ಇರುತ್ತಾರೆ ಎಂದು ಹೇಳುತ್ತಾರೆ . ನನಗೆ ದಾವಾ ಆಸ್ತಿಯ ಬಗ್ಗೆ ಖುದ್ದು ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡಲು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಯಾವುದೇ ಸರ್ವೆ ಮಾಡಿರುವುದಿಲ್ಲ , ಪಂಚಾಯತಿ ನಡೆದಿರುವುದಿಲ್ಲ , ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು